ಡಲ್ಲಾಸ್ ಕನ್ನಡಿಗರಿಗೆ ನಮಸ್ಕಾರಗಳು,

ಮೊದಲಿಗೆ, ನಮ್ಮ ಹೊಸ ಕಾರ್ಯಕಾರಿ ಸಮಿತಿಯ ಪರವಾಗಿ, ನಿಮ್ಮೆಲ್ಲರಿಗು, ನಮಗೆ ಮಲ್ಲಿಗೆ ಕನ್ನಡ ಸಂಘದ ಸೇವೆಯನ್ನು ಸಲ್ಲಿಸುವುದಕ್ಕೆ ಅವಕಾಶ ಕರುಣಿಸಿದ್ದಕ್ಕೆ ಹೃತ್ಪೂರ್ವಕ ಧನ್ಯವಾದಗಳು.

ನಮ್ಮ ಸಮಿತಿಯ ಮೊದಲ ಕಾರ್ಯಕ್ರಮವಾದ "ಸಂಕ್ರಾಂತಿ ೨೦೧೭", ನಿಮ್ಮೆಲ್ಲರ ಅಭಿಮಾನದಿಂದ ಭಾರಿ ಯಶಸ್ಸು ಕಂಡಿತು. ನಮ್ಮ ಸಂಘದಲ್ಲಿ ಮೊದಲ ಬಾರಿಗೆ ಬಾಳೆ ಎಲೆ ಊಟದ ವ್ಯವಸ್ಥೆಯನ್ನು ಮಾಡಿದ್ದೆವು. ಕಾರ್ಯಕ್ರಮಕ್ಕೆ ಬಂದ ಬಹಳ ಜನರು ಅದರ ಪ್ರಶಂಸೆ ಮಾಡಿದ್ದನ್ನು ಕೇಳಿ ನಮಗೆ ಬಹಳ ಆನಂದವಾಯಿತು. ಇನ್ನು ಮುಂದೆ ಸಹ ಹೀಗೆ ಹೊಸ ಪ್ರಯೋಗಗಳನ್ನು ಮಾಡುವ ಪ್ರಯತ್ನ ಮಾಡುತ್ತೇವೆ.

ನಮ್ಮ ಹೊಸ ಸಮಿತಿಯು ಕೆಲವು ಧ್ಯೇಯಗಳನ್ನು ಇಟ್ಟುಕೊಂಡು ಅದರ ಪ್ರಕಾರ ಕಾರ್ಯ ನಿರ್ವಹಣೆಯನ್ನು ಮಾಡುತ್ತೇವೆ.

೧. ಮೊದಲಿಗೆ, ನಮ್ಮ ಡಲ್ಲಾಸ್ ಕನ್ನಡ ಸಮುದಾಯದಲ್ಲಿ ಇರುವ ಯುವ ಪೀಳಿಗೆಗೆ ಪ್ರಾಮುಖ್ಯತೆಯನ್ನು ಕೊಟ್ಟು, ಅವರನ್ನು ನಮ್ಮ ಸಂಘದ ಮುಂದಾಳತ್ವಕ್ಕೆ ತಯಾರು ಮಾಡುವುದು.

೨. ನಮ್ಮ Bye laws ಪ್ರಕಾರ ಪ್ರತಿ ವರ್ಷ ನಾವು charitable organizations ಗೆ ಹಣ ಸಂಗ್ರಹಣೆ ಮಾಡಿ ಕೊಡಬೇಕು. ಯಾವ ಸಂಸ್ಥೆಗಳಿಗೆ ಹಣದ ಅವಶ್ಯಕತೆ ಇದೆ ಎಂದು ಪರಿಶೀಲನೆ ಮಾಡಿ ಅಂತಹ ಸಂಸ್ಥೆಗಳಿಗೆ ನಮ್ಮ ಸಹಾಯ ನೀಡುವುದು.

೩. ಬರಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊರತಾಗಿ, ನಮ್ಮ ಜನಗಳಿಗೆ networking opportunities ಸಿಗುವ ಹಾಗೆ ಬೇರೆ ವಿಧ್ಯುಕ್ತವಾಗಿರದ ಕಾರ್ಯಕ್ರಮಗಳನ್ನು ನಡೆಸುವುದು.

೪. ನಮ್ಮ ಕನ್ನಡ ಸಂಘದ ಸದಸ್ಯರ ಮಕ್ಕಳಿಗೆ ಬೇಕಾಗುವ volunteer service hours ಗೆ ಅವಕಾಶಗಳನ್ನು ಕೊಡುವುದು.

೫. ಡಲ್ಲಾಸ್ ನಗರದಲ್ಲಿ ಓದುತ್ತಿರುವ ಕಾಲೇಜು ವಿದ್ಯಾರ್ಥಿಗಳಿಗೆ ಕೆಲಸ ಹುಡುಕುವುದರಲ್ಲಿ ಸಹಾಯ ಮಾಡುವುದು.

ಹೀಗೆ ಹಲವಾರು ಧ್ಯೇಯಗಳನ್ನು ಇಟ್ಟುಕೊಂಡು ಕಾರ್ಯ ನಿರ್ವಹಣೆ ನಡೆಸುತ್ತೇವೆ. ನಮ್ಮ ಪ್ರಾಥಮಿಕ ಗಮನ ನಮ್ಮ ಮಕ್ಕಳನ್ನು ಸಮುದಾಯದ ನಾಯಕರನ್ನಾಗಿ ಮಾಡುವುದು.

ಮುಂದೆ ಬರುವ ಕನ್ನಡ ಸಂಘದ ಕಾರ್ಯಕ್ರಮಗಳಿಗೆ ಮತ್ತು ಯೋಜನೆಗಳಿಗೆ ನಿಮ್ಮೆಲ್ಲರ ಸಹಕಾರ, ಬೆಂಬಲ ಮತ್ತು ಅಭಿಮಾನಗಳನ್ನು ಕೋರುವ
ಇಂತಿ ನಿಮ್ಮ

ಶ್ರೀವತ್ಸ ರಾಮನಾಥನ್